

ಅಟೇಯ ಅಂದುದ್ದಕ್ಕೇ ಒಪ್ಪಿದ್ದು. ಅದೋ ಬರೀ ನೀರು ಕುಡ್ಯಾದು, ವುಚ್ಚೆ ವೊಯ್ಯೋದು ಬಕೀಟು ಕೊಟ್ಟೂ ಕೊಟ್ಟು ಸಾಕಾಗ್ತಿತ್ತು ಬಕೀಟು ಕೋಡೋದು ಸ್ವಲ್ಪ ತಡವಾದ್ರೂ ಹಾಸಿಗೇಲೇ ಮಾಡ್ಕಂಬಿಡ್ತಿತ್ತು ಸರೀ, ತೊಳ್ದೂ ಬಳ್ದೂ ವರೆಸಿದ್ರೆ ಸಾಲ್ದಂತೆ ಪಾಂಡ್ಸು ಸುರ್ದು ವಣಗಿದ್ ಬಟ್ಟೆ ಹಾಕ್ಬೇಕಿತ್ತಮ್ಮೋ ಅಷ್ಟಕ್ಕೇ ಸುಮ್ನಾಗ್ತಿತ್ತಾ? ಊಹೂಂ! ಮುದ್ಕಿ ಬಲ್ ಜೋರಿತ್ತು, ಒಂದೀಟೂ ಕೂರಕ್ಕೆ ಬುಡ್ತಿರ್ನಿಲ್ಲ, ನಾ ಕೂತ್ನೋ ಕೆಂಪೀ ಕೆಂಪೀ ಅಂತಾ ಬಡ್ಕಣಾದು... ಅದು ಯೋಳಿದ್ದೇ ಹಣ್ಣಿನ ರಸವೋ ಬಿಸ್ಕತ್ತೋ ಕೊಡ್ಬೇಕಿತ್ತು, ಬಾಯಿರುಚೀಗೇನೂ ಕಡ್ಮೆ ಇರ್ನಿಲ್ಲ. ಆಯಮ್ಮನ ಎಬ್ಸಿ ಕೂರ್ಸೋದು, ಅಂಡು ತೊಳ್ಸೋದು ಮಾಡೀ ಮಾಡಿ ರಟ್ಟೆ, ಸೊಂಟ ಬಿದ್ದೋಗಿದ್ದಕ್ಕೇ ಬುಟ್ಟಿದ್ದು' ಕಲ್ಲಿಯ ಮಾತಿಗೆ ಥಟ್ಟನೆ ಪ್ರತಿಕ್ರಿಯಿಸಿದ್ದಳು ಕೆಂಪಿ. ಇವಳಿಗೋ ಒಳಗೊಳಗೇ ನಗು, ಕೆಲಸ ಬಿಡುತ್ತಾಳೆಂಬ ಸಂಕಟಕ್ಕೆ ಮತ್ತೆ ಕಾಲೆಳೆದಿದ್ದಳು.

'ಮತ್ತೆ ಹೆಣ್ಣು ಮಕ್ಕಳ ಪೀಜೀಲಿ ಚಪಾತಿ ಮಾಡೋ ಕೆಲ್ಸ ಕೈತುಂಬಾ ಸಂಬಳಾ ಉಳಿದ ಚಪಾತೀನೂ ಮನೇಗೆ ತರ್ಬಹುದು ಅಂತಲೇ ಕೆಲ್ಸ ಬಿಟ್ಟು ಮತ್ತೊಮ್ಮೆ ಹೋಗಿದ್ಯಲ್ಲೇ ಚಪಾತಿ ಮಾಡೋಕೆ ನಾಲ್ಕು ಜನಾ ಇರೋದು ಅಂತಲೂ ಹೇಳಿದ್ದೀ ಮತ್ಯಾಕೆ ಬಿಟ್ಟದ್ದು?' ಅವಳೇಕೆ ಬಿಟ್ಟದ್ದು ಅಂಬೋದು ಗೊತ್ತಿದ್ದರೂ ಬೇಕೆಂದೇ ಕೆದಕಿದಳು.

'ಅಯ್ ಬುಡ್ರಮ್ಮೋರೆ, ಅಂಗಿಸ್ತಿದ್ದೀರಾ? ಅಲ್ಲಿ ಇದ್ದದ್ದು ಐವತ್ತು ವುಡಗೀರೇಯಾ ವೊಬ್ರಿಗೆ ಆರು ಚಪಾತಿ ಅಂತ ಇಡದ್ರೂವೇ ದಿನಕ್ಕೆ ಮುನ್ನೂರು ಚಪಾತಿ ಬೇಜಾನ್ ಆಕ್ತಿತ್ತು ಕಣಕ್ಕಾ ಆದ್ರೆ ಅವು ದಿವ್ಸಕ್ಕೆ ಯೋಳ್ನೂರು, ಯೆಂಟ್ನೂರು ಚಪಾತಿ ಮಾಡಿಸ್ಕತಿದ್ರು. ವುಜ್ಜೀ ವುಜ್ಜಿ ರಟ್ಟೆ ಬಿದ್ದೋಗೋದು ಕ್ಯಾಂಟೀನಿಗೆ ಮಾರ್ಕತಿದ್ರಂತೆ. ಆರೋಗ್ಯಕ್ಕಿಂತಾ ಅಣ ಮುಖ್ಯಾನೇ ಅಂದ್ಕಂಡು ಕೆಲ್ಸಾ ಬುಟ್ಟೆ ಕಣಕ್ಕಾ' ಸಶಬ್ದವಾಗಿ ಚಹಾ ಹೀರಿದ್ದು ಸಿಟ್ಟನ್ನು ಹೊರಹಾಕಿದಂತಿತ್ತು.

'ನೋಡೇ ಕೆಂಪಿ, ನಿಂಗೆ ನಮ್ಮ ಮನೇನೇ ಸರಿ. ಕೆಲ್ಸವೂ ಜಾಸ್ತಿ ಇರಲ್ಲ. ಅದು ಗೊತ್ತಿದ್ದೇ ಎರಡ್ಮೂರು ಸಲ ಕೆಲ್ಸ ಬಿಟ್ರೂ ಮತ್ತೆ ನಮ್ಮನೇಗೇ ಬಂದದ್ದಲ್ವೇನೇ ನಮ್ಮಂಥ ನಾಲ್ಕೈದು ಮನೆ ಹಿಡ್ಕೊಂಡ್ರೆ ಅರ್ಧ ದಿನದಲ್ಲಿ ಕೆಲ್ಸಾ ಮುಗ್ಸಿ ಆರಾಮಾಗಿ ಮನೇ ಸೇರ್ಕೋಬಹುದು. ಚಹಾ, ನಾಸ್ಟಾ ಕೂಡ ಆಗೋಗತ್ತೆ. ನಾಲ್ಕೈದು ಮನೇ ಸಂಬಳಕ್ಕಿಂತ ಹೆಚ್ಚೇನೂ ಅವ್ರು ಕೊಡಲ್ಲ, ಕೊಡೋಕ್ಕೂ ಆಗಲ್ಲ ತಾನೇ? ಅಷ್ಟು ಹೇಳಿದ್ರೂ ತಿರಗಾ ಕೆಲ್ಸಾ ಬಿಡೋ ವಿಚಾರ ಮಾಡ್ತಿದ್ದೀಯಲ್ಲಾ ಏನ್ ಹೇಳ್ಬೇಕು ನಿಂಗೆ? ಸರಿ, ಈಗೆಲ್ಲಿ ಕೆಲ್ಸ ಸಿಕ್ಕಿದೆ?'

'ವುಚ್ಚಾಸ್ಪತ್ರೇಲಿ ಕೆಲ್ಸಾ ಸಿಕ್ಕಿರೋದಕ್ಕಾ ಆಯಾ ಕೆಲ್ಸ. ಆರು ತಿಂಗಳು ಆಗ್ತಿದ್ದಂಗೇ ಕೆಲ್ಸಾ ಪರ್ಮೆಂಟಂತೆ ಜತಿಗೆ ಟಿಯೇ, ಡೀಯೇ, ಟೈಪಂಡು ಯೆಲ್ಲಾನೂ ಐತಂತಕ್ಕಾ ವಾರಕ್ಕೊಂದು ರಜಾ ಅಬ್ಬ, ಅರ್ದಿನಕ್ಕೂ ರಜೆ ಐತಂತ್ರಕ್ಕಾ ಬ್ರೋಕರ್ರು ಯೆಲ್ಲಾ ಯೋಳವ್ನೇ ಸರ್ಯಾಗಿ ಇಚಾರ್ಸಿ ತಿಳ್ಕಂಡೇ ವೋಯ್ತಿದ್ದೀನಿ ಕಣಕ್ಕೋ ಈ ದಪಾ ಬುಟ್ಕೊಡೋ ಮಾತೇ ಯಿಲ್ಲ!'

ಇನ್ನಿವಳನ್ನು ಓಲೈಸಲಾಗದು, ಎಲ್ಲವನ್ನೂ ತಿಳಿದುಕೊಂಡೇ ಬಂದಿದ್ದಾಳೆ ಆರೇಳು ವರ್ಷಗಳಿಂದಲೂ ಹೊಂದಿಕೊಂಡು ಕೆಲ್ಸಾ ಮಾಡ್ತಿದ್ದವಳು ಬಿಟ್ರೆ ಏನ್ಗತಿ? ಹೇಗೋ ಮನೇ ಕೆಲ್ಸಕ್ಕೆ ತಿದ್ದಿ, ತೀಡಿ ಹೊದಿಸಿಕೊಂಡದ್ದಾಗಿತ್ತು ಹೊಸಬಳನ್ನೆಲ್ಲಿಂದ ಹುಡುಕಿ ತರಲಿ ಎಂದುಕೊಂಡ ಕಲ್ಲಿ ಥಟ್ಟನೆ ಹೊಳೆದದ್ದನ್ನು ಕೊನೇ ಅಸ್ತ್ರವಾಗಿಸಿದಳು.

'ನಿನಗೇನು ಹುಚ್ಚೇನೇ? ಹುಚ್ಚಾಸ್ಪತ್ರೇಲಿ ಕೆಲ್ಸಾ ಅಂತೀಯಾ ಅಲ್ಯಾಕೆ ಸೇರ್ತಿದ್ದೀ? ಅವ್ರುಗಳ ಮಧ್ಯೆ ಕೆಲ್ಸಾ ಮಾಡೋದು ಎಷ್ಟು ಕಷ್ಟ ಅಂತೇನಾದ್ರೂ ಗೊತ್ತಾ? ಅಷ್ಟಕ್ಕೂ ಅಂಥಾವ್ರ ಜೊತೆ ಕೆಲ್ಸಾ ಮಾಡಿದ ಅನುಭವ ನಿಂಗೆಲ್ಲಿದೆ? ಸುಮ್ನೇ ಇಲ್ಲದ ತಾಪತ್ರಯ ತಂದ್ಕೋತಿದ್ದೀ ಅನ್ಸುತ್ತೆ'

'ಅಯ್ ಅಂಗ್ಯಾಕಂತೀರಕ್ಕೋ ಅನುಭವ ಯಿಲ್ದೇ ಯೇನೂ? ನಿಮ್ಮನೇಲೇ ಯೋಳು ವರ್ಸದಿಂದ್ಲೂ ಕೆಲ್ಸಾ ಮಾಡ್ತಿಲ್ವೇ ಅಸ್ಟು ಅನುಭವಾ ಸಾಕಕ್ಕೋ ಈ ಜೀವಕ್ಕೆ ಯೆಂತವ್ರ ಜತಿಗೂ ಆಯಾಗಿ ಯೇಗ್ಬೌದು!'

ಥಟ್ಟನೆ ಕೆಂಪಿ ಹೇಳಿದಾಗ 'ಏನಾದ್ರೂ ಮಾಡ್ಕೊ ಹೋಗು' ಅಂದವಳೇ ಮೌನಕ್ಕೆ ಶರಣಾದ ಕಲಾವತಿ ಅದೊಂದು ಬಗೆಯ ಭಾವದಲ್ಲಿ ಸೊಪ್ಪಿನ ಬೆಳೆದ ದೇಟನ್ನು ಸರಸರನೆ ಮುರಿಯುವುದರಲ್ಲಿ ಮಗ್ನಳಾದರೂ ಮನದಲ್ಲಿ ಗುಂಗಿಹುಳದ ಕೊರೆತ ಜೋರಾಗಿತ್ತು, ಕೆಂಪಿಯೇಕೆ ಹಾಗಂದದ್ದು? ಹಾಗಾದರೆ ನಮ್ಮ ಮನೆಯಲ್ಲಿರುವವರೆಲ್ಲಾ!

ಪ್ರತಿಕ್ರಿಯಿಸಿ: feedback@sudha.co.in